ಕೇಳೋರಿಲ್ಲ, ಹುಟ್ಟಿದ್ರೂ ಕೇಳೋರಿಲ್ಲ' ಎಂದಳು.

ನಾನೇ ಪಾಪ ಇವರನ್ನು ಯೋಚಿಸುವಂತೆ ಮಾಡಿದೆ ಎಂದೆನಿಸಿ 'ಛೇ... ಕ್ಷಮಿಸು ಅಕ್ಕ. ಏನೆನೋ ಕೇಳಿಬಿಟ್ಟೆ. ಸಮಾಧಾನ ಮಾಡಿಕೋ, ನಾನಿದೀನಿ ನಿಮ್ಮ ಜೊತೆ' ಅಂದೆ. ಅವರೇಕೋ ನನ್ನವ್ವ ಕರಿಯವ್ವನಂತೆ ಕಂಡರು. ಮನಸ್ಸಲ್ಲಿ ಏನೂ ಬಚ್ಚಿಡದ ನಿಷ್ಕಪಟಿ, ತ್ಯಾಗಮಯಿ. ನನ್ನವ್ವನಂತೆ ಇವಳದು ಕೂಡಾ ಬದುಕು, ಭವಿಷ್ಯಕ್ಕೆ ಒಳ್ಳೇದಾರಿಯಾಗಲಿಲ್ಲ ಎನ್ನಿಸಿತು. ಕಣ್ಣೀರು ತೊಟ್ಟಿಕ್ಕುತ್ತಿದೆ. ಅರಿವೇ ಇಲ್ಲ. ಕಣ್ಣೀರು ಎಷ್ಟು ಅಮೂಲ್ಯವಾದದ್ದು, ಯಾರನ್ನು ನೋಡಿದ್ರೂ ಕೂಡಾ ನಗು ಬರುತ್ತೆ. ಆದ್ರೆ ಅಳು, ಕಣ್ಣೀರು ಸುಲಭವಾಗಿ ದಕ್ಕದು. ಮನಸ್ಸಿನಾಳದಲ್ಲಿ ನಾಟಿ ಬೆಳೆದ ಬೆಳೆಗೆ ಮಾತ್ರ ಸೀಮಿತ. ನನಗೂ ಅವಳು ನಾಟಿ ಬೆಳೆದ ಬೆಳೆಯಾಗಿದ್ದಳು.

ನನಗೆ ನೆನಪಾಗಿದ್ದು ಕೆಂಚಿಯ ಜೊತೆ ಬರುವ ಅವಳ ಗೆಳತಿ ಸೇವಂತಿ. 'ಯಾಕೆ ಅಕ್ಕ ಸೇವಂತಿ ಎಲ್ಲಿ?' ಎನ್ನುವಷ್ಟರಲ್ಲಿ ನಾನೇ ಮನಸ್ಸಿನಲ್ಲಿ ಅಂದು ಕೊಳ್ಳುತ್ತಿದ್ದೆ, ತುಂಬಾ ಕೆಲಸವಿದ್ದಿತ್ತೇನೋ? ಅಥವಾ ಇಂದು ಗಾಂಧೀ ಜಯಂತಿ... ಅದಕ್ಕೆ ಲೇಟಾಗಿರಬಹುದೇನೋ ಗೊತ್ತಿಲ್ಲ. ಅವಳನ್ನೇ ಮಾತನಾಡಿಸಿದೆ. 'ಸೇವಂತಿ ಅಕ್ಕ, ಸೇವಂತಿ ಅಕ್ಕ, ಯಾರಾದ್ರೂ ಇಲ್ಲಿಗೆ ಬನ್ನಿ ಒಸಿ.'

'ನಾ ಸೇವಂತಿನೇ ಇದೀನ್ರಿ'

ಆ ಧ್ವನಿ ಕಿವಿಗೆ ಬೀಳುವಾಗ ಕೋಗಿಲೆ ತನ್ನ ಮರಿಯನ್ನು ಕಾಗೆ ಗೂಡಲ್ಲಿ ಬಿಟ್ಟು ಹೋದದ್ದು, ಆಮೇಲೆ ಅದು ಇಂಪಾಗಿ ಹಾಡೋದನ್ನ ಮರೆತದ್ದು, ಮರೆಯುವಂತೆ ಸಮಯ ರೂಪಿತವಾಗಿದ್ದು ನೆನಪಾಯಿತು. ಯಾರದ್ದೋ ಆಟ, ಯಾರಿಗೋ ಖುಷಿ, ಯಾರಿಗೋ ನೋವು ಎಂದು ಅನ್ನಿಸಿತು ನನಗೆ.

ಸೇವಂತಿ ಅಕ್ಕ ಈ ಊರಿಗೆ ಹೊಸಬಳು. ಕೆಂಚಕ್ಕ ಇವಳನ್ನು ಕೇರಿಗೆ ಕರೆದುಕೊಂಡು ಬಂದಿದ್ಲು. ಹೊಸತರಲ್ಲಿ ಹಾಲುಗೆಂಪು ಬಣ್ಣ, ನೀಳ ಕೂದಲು, ಇಷ್ಟಗಲ ಹುಬ್ಬು, ಸನ್ನಿವೇಶಕ್ಕೆ ತಕ್ಕಂಥ ನಗು. ಅವಳ ರೂಪವನ್ನು ನೆನಸಿಕೊಳ್ಳುತ್ತಿರುವಾಗಲೇ ನನ್ನ ಮುಂದೆ ಸೇವಂತಿ ಬಂದು ನಿಂತದ್ದು ನನಗೆ ಗೊತ್ತಾಗಲಿಲ್ಲ.

ಬಂದವಳೇ ಪಿನ್ನಿನಿಂದ ಮೆತ್ತಗೆ ಚುಚ್ಚಿದಾಗ ಹಾ... ಎಂದು ಚೀರಿದೆನು. ಪಕ್ಕದಲ್ಲಿದ್ದ ಕೆಂಚಕ್ಕ ಏನು ಯೋಚ್ನೆ ಮಾಡ್ತಿದ್ದೆ ಎಂದಳು. ಏನಿಲ್ಲ ಎಂದೆ. 'ಸೇವಂತಿ ಅಕ್ಕ ಯಾವಾಗ ಬಂದ್ರಿ' ಎಂದೆ.

'ಈಗ ಬಂದೆ ಕಣ್ರವ್ವಾ, ಇವತ್ತು ಗಾಂಧೀ ಜಯಂತಿ ಇತ್ತು. ಸ್ವಚ್ಛಭಾರತ ದಿವಸ ಅಂತೆ. ಏನೋ ದೊಡ್ಡ ಮಂದಿಯೆಲ್ಲ ಬಂದಿದ್ರು. ಅದಕ್ಕೆ ತಡ ಆಯಿತು ಕಣ್ರವ್ವಾ' ಎಂದಳು.

'ಹೌದು ಬಿಡು ದೊಡ್ಡ ಮಂದಿಗೆ, ಗಾಂಧೀ ಜಯಂತಿ ಬಂದ್ರೆ ಮಾತ್ರ ರಸ್ತೆಗಳಲ್ಲಿನ ಕಸ, ಹಸಿರಿನ ಬರ ಕಾಣುತ್ತೆ. ಉಳಿದ ದಿನಗಳು ಕಾಣುವುದೇ ಇಲ್ಲ ಅವರಿಗೆ' ಎಂದೆ.

'ಕೆಲಸ ಮಾಡುವವರು ಕೂಡಾ ಕಾಣುವುದಿಲ್ಲ. ಅವರ ಕಷ್ಟ, ಜೀವನನೂ ಕಾಣೋದಿಲ್ಲ. ಪ್ರಭುಗಳಿಗೆ ಅವರ ಕುರ್ಚಿ ಉಳಿಸಿಕೊಳ್ಳೋದು ಒಂದೇ ಕೆಲಸ. ಅವರ ಹೆಂಡತಿ ಮಕ್ಕಳನ್ನು ರಾಣಿ ತರಹ, ಕುಬೇರ ವಂಶದವರ ಹಾಗೆ ಸಾಕೋದೆ ಚಿಂತೆ. ಬಡವರ ಬಗ್ಗೆ ಚಿಂತೆ ಮಾಡಿದ್ರೆ ಮತ್ತೆ ಅವರಿಗೆ ಬಿ.ಪಿ, ಶುಗರ್ ಬಂದು ಬಿಟ್ರೆ. ಕೆಳಜಾತಿಯವರನ್ನು ಮನುಷ್ಯರಂತೆ ನೋಡಿದ್ರೆ, ಅವರಿಗೆ ಅವಮಾನ ಯವ್ವಾ... ಊರನ್ನೇ ಸ್ವಚ್ಛ ಮಾಡೋ ನಮ್ಮ ಮಂದಿ ಬಾಳು ಬಾಳೇ? ಇದನ್ನು ಯಾರು ಸ್ವಚ್ಛ ಮಾಡುವರೋ ಗೊತ್ತಿಲ್ಲ ಕಣವ್ವ. ನಮ್ಮ ಬದುಕಿಗೆ ಒಂದು ಅರ್ಥ ಇಲ್ಲ ಅನ್ನಿಸುತ್ತೆ' ಎಂದಳು.

'ನಿಜ, ಮುಖವಾಡದ ಮನಸ್ಸುಗಳ ಮನುಷ್ಯರುಗಳೇ ಈ ಜಗತ್ತಲ್ಲಿ ತುಂಬಿರೋದು ಇವುಗಳನ್ನು ಬದಲಾಯಿಸಲು ಆಗುವುದಿಲ್ಲವೇ?' ಎಂದೆನಿಸಿತು. ಮನಸ್ಸಿನಲ್ಲಿ ಅವರಿಗೊಂದು ಧಿಕ್ಕಾರ ಹಾಕಿದೆ. ಕೆಂಚಕ್ಕನಿಗಿಂತ ನನಗೆ ಸೇವಂತಿ ಅಕ್ಕಳೇ ಆಪ್ತಳೆನಿಸಿದಳು. ಮಾತಿನಲ್ಲಿ ಅವಳ ಸಾಮಾಜಿಕ ಪ್ರಜ್ಞೆ ಏನೂ ಮಾಡಲಾಗದ ಅಸಹಾಯಕತೆ ಕಂಡಿತು.

ಹೀಗೆ ದಿನ ಕಳೆದಂತೆ ನನಗೆ ಕೆಂಚಕ್ಕ ಎಷ್ಟು ಆತ್ಮೀಯಳೆನಿಸಿದಳೋ ಹಾಗೇ, ಸೇವಂತಿ ಅಕ್ಕನೂ ಆತ್ಮೀಯಳೆನಿಸಿದಳು. ನಾನು ಬಿಜಾಪುರದವಳಾಗಿದ್ದರಿಂದ ನನಗೆ ಅವರೆಲ್ಲ ಆತ್ಮೀಯರಾದರೋ ಅಥವಾ ಅವರ ಸೂಕ್ಷ್ಮ ಮನಸ್ಸು, ಬದುಕನ್ನು ಎದುರಿಸಿ ಬಾಳುತ್ತಿರುವ ಅವರ ಜೀವನಕ್ರಮ ಆತ್ಮೀಯವಾಗಿಸಿತೋ ಗೊತ್ತಿಲ್ಲ, ನಿಜಕ್ಕೂ ಇಪ್ಪತ್ತು ವರ್ಷಕ್ಕೆ ಜೀವನದಲ್ಲಿ ಜುಗುಪ್ಸೆ